UASB Library
Newspaper Clippings
Friday 10-06-2022 Pg .1
Jai Kisan

ಕನಿಷ್ಠ ಬೆಂಬಲ ಬೆಲೆ 'ಗರಿಷ್ಠ'ವಲ್ಲ!

ಉತ್ಪಾದನಾ ವೆಚ್ಚಕ್ಕೆ ಹೋಲಿಸಿದರೆ ಎಂಎಸ್‌ಪಿ ಏನೇನೂ ಸಾಲದು



ವಿಕ ಫೋಕಸ್

ಭತ್ತ, ತೊಗರಿ ಮತ್ತು ಮೆಕ್ಕೆಜೋಳ ಸೇರಿ 13 ಧಾನ್ಯಗಳಿಗೆ ಕೇಂದ್ರ ಸರಕಾರವು ಕನಿಷ್ಠ ಬೆಂಬಲ ಬೆಲೆ ಘೋಷಿಸಿದೆ. ಆದರೆ, ಉತ್ಪಾದನಾ ವೆಚ್ಚಕ್ಕೆ ಹೋಲಿಸಿದರೆ ಸರಕಾರದ 'ಬೆಂಬಲ' ಯಾವುದಕ್ಕೂ ಸಾಕುವುದಿಲ್ಲ. ಮೇಲ್ನೋಟಕ್ಕೆ ರೈತರಿಗೆ ನೆರವು ನೀಡಿದಂತೆ ಕಂಡರೂ, ವಾಸ್ತವದಲ್ಲಿ ಅದರಿಂದ ಅಂಥ ಪ್ರಯೋಜನವಿಲ್ಲ. ಈ ಹಿನ್ನೆಲೆಯಲ್ಲಿ ಏನಿದು ಎಂಎಸ್‌ಪಿ, ಭತ್ತ ಮತ್ತು ತೊಗರಿಗೆ ಯಾಕೆ ಎಂಎಸ್‌ಪಿ ಸಾಕಾಗಲ್ಲ, ಸರಕಾರ ಏನು ಮಾಡಬೇಕು ಎಂಬಿತ್ಯಾದಿ ಮಾಹಿತಿ ಇಲ್ಲಿದೆ.

ರಾಜ್ಯದಲ್ಲಿ ಮೆಕ್ಕೆಜೋಳ ಬೆಂಬಲ ಬೆಲೆಗೆ ಕೊಕ್ಕೆ!

ಮೆಕ್ಕೆಜೋಳಕ್ಕೆ ಕೇಂದ್ರ ಸರಕಾರ ಪ್ರತಿ ವರ್ಷ ಉತ್ತಮ ಬೆಂಬಲ ಬೆಲೆ ಘೋಷಿಸುತ್ತಿದೆಯಾದರೂ ಕರ್ನಾಟಕದ ಪಾಲಿಗೆ ಅದು ಬರೀ ಘೋಷಣೆಯಾಗಿ ಉಳಿಯುತ್ತದೆ. ರೈತರಿಗೆ ದಕ್ಕುತ್ತಿಲ್ಲ. ಇದಕ್ಕೆ ತಾಂತ್ರಿಕ ಸಮಸ್ಯೆ ಕಾರಣ. ಪ್ರಸಕ್ತ ಸಾಲಿನಲ್ಲೂ ಮೆಕ್ಕೆಜೋಳಕ್ಕೆ ಪ್ರತಿ ಕ್ವಿಂಟಾಲ್‌ಗೆ ಕಳೆದ ವರ್ಷಕ್ಕಿಂತ 92 ರೂ. ಹೆಚ್ಚಳ ಮಾಡಿ, 1962 ರೂ. ಬೆಂಬಲ ಬೆಲೆ ಘೋಷಿಸಿದೆ. ಆದರೆ, ರಾಜ್ಯ ಸರಕಾರ ಖರೀದಿ ಕೇಂದ್ರ ತೆರೆದು ಬೆಂಬಲ ಬೆಲೆಯಲ್ಲಿ ಖರೀದಿ ಮಾಡುತ್ತಿಲ್ಲ.

2015-16 ರಲ್ಲಿ ಕೇಂದ್ರ ಸರಕಾರ ಎಂಎಸ್‌ಪಿ ನೀಡುವ ನಿಯಮಗಳಿಗೆ ಒಂದು ತಿದ್ದುಪಡಿ ತಂದು, ಪಡಿತರವಾಗಿ ನೀಡುವ ಧಾನ್ಯಗಳಿಗೆ ಮಾತ್ರ ಬೆಂಬಲ ಬೆಲೆ ನೀಡಿ ಖರೀದಿ ಮಾಡಬೇಕು ಎಂಬ ನಿಯಮ ರೂಪಿಸಿತು. ಸಿಕ್ಕಿಂ ಸೇರಿ ಸಪ್ತ ರಾಜ್ಯಗಳು ಮತ್ತು ಉತ್ತರದ ರಾಜ್ಯಗಳಲ್ಲಿ ಪಡಿತರದಲ್ಲಿ ಮೆಕ್ಕೆಜೋಳ ನೀಡುವುದರಿಂದ ಆ ರಾಜ್ಯಗಳಿಗೆ ಸಮಸ್ಯೆ ಆಗಲಿಲ್ಲ. ಆದರೆ ರಾಜ್ಯದಲ್ಲಿ ಈ ವ್ಯವಸ್ಥೆ ಇಲ್ಲದ ಕಾರಣ ಇಲ್ಲಿನ ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ಇಲ್ಲ.

ಇಲ್ಲಿಯೂ ಪಡಿತರದಲ್ಲಿ ಮೆಕ್ಕೆಜೋಳ ವಿತರಿಸಲು ಕ್ರಮ ಕೈಗೊಳ್ಳಬಹುದಿತ್ತು ಇಲ್ಲವೇ ಕೇಂದ್ರ ಸರಕಾರದ ಜತೆ ಮಾತುಕತೆ ನಡೆಸಿ ಈ ಹಿಂದೆಯದ್ದ ವ್ಯವಸ್ಥೆ ಮನವರಿಕೆ ಮಾಡಿ ಹೊಸ ತಾಂತ್ರಿಕ ಸಮಸ್ಯೆ ಬಗೆ ಹರಿಸಬಹುದಿತ್ತು. ಆದರೆ, ಸರಕಾರ ಈ ದಿಸೆಯಲ್ಲಿ ದಿವ್ಯ ನಿರ್ಲಕ್ಷ್ಯ ವಹಿಸಿದೆ.



ರಾಜ್ಯದ ಪಾಲು ಶೇ. 16.5

ದೇಶದ ಮೆಕ್ಕೆಜೋಳದ ಒಟ್ಟು ಉತ್ಪಾದನೆಯಲ್ಲಿ ನೆರೆಯ ಆಂಧ್ರಪ್ರದೇಶ ಶೇ.20.9ರಷ್ಟಿದ್ದು ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ರಾಜ್ಯ ಶೇ.16.5 ರಷ್ಟಿದ್ದು ಎರಡನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ದಾವಣಗೆರೆ, ಬೆಳಗಾವಿ, ಹಾವೇರಿ, ಬಳ್ಳಾರಿ, ಬಾಗಲಕೋಟೆ, ಚಿತ್ರದುರ್ಗ ಹಾಗೂ ಅಲ್ಪ ಪ್ರಮಾಣದಲ್ಲಿ ಶಿವಮೊಗ್ಗ ಮೆಕ್ಕೆಜೋಳ ಬೆಳೆಯುವ ಪ್ರಮುಖ ಜಿಲ್ಲೆಗಳು. 2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 39.6 ಲಕ್ಷ ಟನ್ ಮೆಕ್ಕೆಜೋಳ ಉತ್ಪಾದನೆಯಾಗಿದೆ. ಮೆಕ್ಕೆಜೋಳಕ್ಕೆ ಈಗ ಮಾರುಕಟ್ಟೆಯಲ್ಲಿ ಕ್ವಿಂಟಲ್ 2100 ರಿಂದ 2200 ರೂ. ಬೆಲೆಯಿದ್ದು ಬೆಂಬಲ ಬೆಲೆಗಿಂತ ಹೆಚ್ಚಿದೆ. ಆದರೆ ಸುಗ್ಗಿ ಶುರುವಾಗಿ ಉತ್ಪನ್ನ ಮಾರುಕಟ್ಟೆಗೆ ಲಗ್ಗೆಯಿಡುವ ವೇಳೆಗೆ ಬೆಲೆ ಕುಸಿಯುತ್ತದೆ.

ದೇಶದಲ್ಲಿ ಅತಿ ಹೆಚ್ಚು ಮೆಕ್ಕೆಜೋಳ ಬೆಳೆಯುವ ರಾಜ್ಯಗಳಲ್ಲಿ ಒಂದಾದ ಕರ್ನಾಟಕದ ರೈತರಿಗೆ ಬೆಂಬಲ ಬೆಲೆ ಸಿಗದಂತಾಗಿದೆ, ಸರಕಾರ ನಿರ್ಬಂಧ ತೆಗೆದು ಹಾಕಬೇಕು. ಸಾಮೂಹಿಕ ಎಂಎಸ್‌ಪಿ ಘೋಷಿಸಿ, ರಾಜ್ಯವಾರು ಇಂತಹ ನಿರ್ಬಂಧ ವಿಧಿಸುವುದು ಸರಿಯಲ್ಲ.

- ತೇಜಸ್ವಿ ಪಟೇಲ್ ರೈತ ಮುಖಂಡ

30 ವರ್ಷದಲ್ಲಿ ಭತ್ತದ ಧಾರಣೆಯಲ್ಲಿ 1,100 ರೂ. ಹೆಚ್ಚಳ!

ಕರ್ನಾಟಕದಲ್ಲೂ ಭತ್ತ ಅತಿಪ್ರಮುಖ ಬೆಳೆ. 13.50 ಲಕ್ಷ ಹೆಕ್ಟೇರ್‌ನಲ್ಲಿ 43.46 ಲಕ್ಷ ಟನ್ (ಇಳುವರಿ 32.20 ಕ್ವಿಂಟಾಲ್) ಭತ್ತದ ಉತ್ಪಾದನೆ ಮಾಡಲಾಗುತ್ತಿದೆ. ಭತ್ತದ ಧಾರಣೆ 1980ರ ದಶಕದಲ್ಲಿ ಕ್ವಿಂಟಾಲ್‌ಗೆ 500 ರೂ. ಇದ್ದರೆ ಈಗ 1600ರಿಂದ 1700 ರೂ. ಇದೆ. ಅಂದರೆ ಕಳೆದ 30 ವರ್ಷದಲ್ಲಿ ಭತ್ತದ ಧಾರಣೆ ಕೇವಲ 1,100 ರೂ. ಮಾತ್ರ ಹೆಚ್ಚಳವಾಗಿದೆ.



ಭತ್ತದ ಉತ್ಪಾದನಾ ವೆಚ್ಚ ಎಕರೆಗೆ 30ರಿಂದ 35 ಸಾವಿರ ರೂ. ದಾಟಿ ಹೋಗಿದೆ. ಇಷ್ಟು ಬಂಡವಾಳ ಹಾಕಿದರೂ 18ರಿಂದ 20 ಕ್ವಿಂಟಾಲ್ ಭತ್ತ ಬೆಳೆಯಬಹುದು. ಹಾಕಿದ ಬಂಡವಾಳಕ್ಕೆ ಕನಿಷ್ಠ ಲಾಭ ಬರಬೇಕೆಂದರೆ ಧಾರಣೆ ಕ್ವಿಂಟಾಲ್‌ಗೆ 2,500 ರೂ.ರಿಂದ 3 ಸಾವಿರ ರೂ. ಇರಬೇಕು. ಮುಕ್ತ ಮಾರುಕಟ್ಟೆಯಲ್ಲಿ ಭತ್ತದ ಧಾರಣೆ 1600ರಿಂದ 1700 ರೂ. ಇದೆ. ರೈತರು ನಷ್ಟ ಅನುಭವಿಸುವುದನ್ನು ತಪ್ಪಿಸಲು ಎಂಎಸ್‌ಪಿ ನೀಡುತ್ತಾರೆ. ಕಳೆದ ವರ್ಷ ಎ ಗ್ರೇಡ್ ಭತ್ತಕ್ಕೆ ಕ್ವಿಂಟಾಲ್‌ಗೆ 1960 ರೂ. ಮತ್ತು ಸಾಮಾನ್ಯ ಭತ್ತಕ್ಕೆ 1940 ರೂ. ಎಂಎಸ್‌ಪಿ ಘೋಷಿಸಿತ್ತು. ಈ ವರ್ಷದ ಮುಂಗಾರು ಹಂಗಾಮಿಗೆ ಎ ಗ್ರೇಡ್ ಭತ್ತಕ್ಕೆ 2060 ರೂ. ಮತ್ತು ಸಾಮಾನ್ಯ ಭತ್ತಕ್ಕೆ 20140 ರೂ. ಎಂಎಸ್‌ಪಿ ಘೋಷಿಸಲಾಗಿದೆ. ಆದರೆ, ಈ ಧಾರಣೆಯು ರೈತರಿಗೆ ಆಸರೆ ಸಹ ತಂದು ಕೊಡುತ್ತಿಲ್ಲ, ಬೆಂಬಲ ಬೆಲೆಯನ್ನು 2,500 ರೂ.ಗೆ ಹೆಚ್ಚಿಸಬೇಕು.

ಬಳಕೆ, ಉತ್ಪಾದನೆಯಲ್ಲಿ ಭಾರತ ನಂ.2

ಅಕ್ಕಿಯನ್ನು ಅತಿ ಹೆಚ್ಚು ಬಳಕೆ ಮಾಡುವುದಲ್ಲದೆ ಭತ್ತವನ್ನು ವಿಶ್ವದಲ್ಲೇ ಅತಿ ಹೆಚ್ಚು ಬೆಳೆಯುವಂಥ ಕೀರ್ತಿ ಚೀನಾ ನಂತರದ ಸ್ಥಾನ ಭಾರತಕ್ಕಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬೆಳೆ ಪ್ರದೇಶ 20ಲಕ್ಷ ಹೆಕ್ಟೇರ್‌ಗಿಂತ ಕಡಿಮೆ ಇತ್ತು. ಇಳುವರಿ ಹೆಕ್ಟೇರ್‌ಗೆ 6.50 ಕ್ವಿಂಟಾಲ್ ಇರಲಿಲ್ಲ. ಜನಸಂಖ್ಯೆ ಹೆಚ್ಚಾದಂತೆ ಕೃಷಿ ಬೆಳೆ ಪ್ರದೇಶ ವಿಸ್ತರಣೆ ಆಯಿತು. 1950-51ರಲ್ಲಿ 30.81ಲಕ್ಷ ಹೆಕ್ಟೇರ್, 1980-81ರಲ್ಲಿ 40 ಲಕ್ಷ ಹೆಕ್ಟೇರ್, 1999-2000ದಲ್ಲಿ 45 ಲಕ್ಷ ಹೆಕ್ಟೇರ್, 2009-10ರಲ್ಲಿ 50 ಲಕ್ಷ ಹೆಕ್ಟೇರ್‌ಗೆ ಹೆಚ್ಚಾಯಿತು. 1960ರಲ್ಲಿ ಹೊಸರು ಕ್ರಾಂತಿ ಬಳಿಕ ಇಳುವರಿ ಸಹ ಗಣನೀಯವಾಗಿ ಹೆಚ್ಚುತ್ತಾ ಹೋಯಿತು. ಪ್ರಸ್ತುತ ಹೆಕ್ಟೇರ್‌ಗೆ 32.60 ಕ್ವಿಂಟಾಲ್ ಇಳುವರಿ ಇದೆ. ಆದರೆ, ಕಳೆದ 10 ವರ್ಷದಲ್ಲಿ ಬೆಳೆ ಪ್ರದೇಶ ಮತ್ತೆ ಇಳಿಮುಖವಾಗುತ್ತಿದೆ. 50 ಲಕ್ಷ ಹೆಕ್ಟೇರ್ ಇದ್ದದ್ದು ಪ್ರಸ್ತುತ 40 ಲಕ್ಷ ಹೆಕ್ಟೇರ್‌ಗೆ ಇಳಿದಿದೆ. ವಾರ್ಷಿಕ 157.20 ಲಕ್ಷ ಟನ್ ಭತ್ತದ ಉತ್ಪಾದನೆಯಾಗುತ್ತಿದೆ.

ಏನಿದು ಎಂಎಸ್‌ಪಿ?

ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಎಂಬುದು ಕೃಷಿ ಉತ್ಪನ್ನದ ಬೆಲೆಯಲ್ಲಿ ಯಾವುದೇ ತೀವ್ರ ತರಹದ ಕುಸಿತ ಉಂಟಾದಾಗ ಕೃಷಿ ಉತ್ಪಾದಕರ ಸಹಾಯಕ್ಕೆ ಧಾವಿಸುವ ಒಂದು ಪರಿಹಾರ ರೂಪವಾಗಿದೆ. ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ (ಸಿಎಸಿಪಿ) ಶಿಫಾರಸುಗಳ ಆಧಾರದ ಮೇಲೆ ಕೆಲವು ಬೆಳೆಗಳಿಗೆ ಬಿತ್ತನೆ ಕಾಲದ ಆರಂಭದಲ್ಲಿ ಭಾರತ ಸರಕಾರವು ಕನಿಷ್ಠ ಬೆಂಬಲ ಬೆಲೆಗಳನ್ನು ಘೋಷಿಸುತ್ತದೆ. ಉತ್ಪಾದನೆ ಭಾರಿ ಹೆಚ್ಚಳವಾದ ವರ್ಷಗಳಲ್ಲಿ ಅತಿಯಾದ ಬೆಲೆ ಕುಸಿತದ ವಿರುದ್ಧ ಉತ್ಪಾದಕ ರೈತರನ್ನು ರಕ್ಷಿಸಲು ಎಂಎಸ್‌ಪಿ ಬೆಲೆಯನ್ನು ನಿಗದಿಪಡಿಸಲಾಗುತ್ತದೆ.

ತೊಗರಿ ಬೆಳೆಗಾರರ ಮೂಗಿಗೆ ಕೇಂದ್ರ ಸರಕಾರದ ತುಪ್ಪ

ತೊಗರಿಗೆ ಈ ಬಾರಿ 300 ರೂ. ಕನಿಷ್ಠ ಬೆಂಬಲ ಹೆಚ್ಚಿಸಲಾಗಿದೆ. ಎಲ್ಲ ಸೇರಿ ಕ್ವಿಂಟಾಲ್ ತೊಗರಿಗೆ ಒಟ್ಟು 6,600 ರೂ. ನಿಗದಿಯಾಗಿದೆ. ಆದರೆ, ಉತ್ಪಾದನಾ ವೆಚ್ಚಕ್ಕೆ ತಕ್ಕಂತೆ ಬೆಲೆ ಹೆಚ್ಚಿಸದೇ ಇರುವುದು ಅನ್ನದಾತರ ಆಕ್ರೋಶಕ್ಕೆ ಕಾರಣವಾಗಿದೆ. ಈ ಮೊದಲು 7ರಿಂದ 8 ನೂರು ರೂ.ಗೆ 50 ಕೆಜಿ ಡಿಎಪಿ ಗೊಬ್ಬರ ಸಿಗುತ್ತಿತ್ತು, ಆದೀಗ 1100 ರೂ.ಗೆ ಹೆಚ್ಚಿದೆ. ಬೀಜದ ಬೆಲೆ ಕೆಜಿಗೆ 100-200 ರೂ. ಏರಿಕೆಯಾಗಿದೆ. ಹೆಚ್ಚು ಕೂಲಿ ಹಣ ನೀಡಬೇಕಿದೆ. ಹೀಗಾಗಿ ತೊಗರಿ ಉತ್ಪಾದನಾ ವೆಚ್ಚ ಹೆಚ್ಚುತ್ತಿದ್ದು, ಇದಕ್ಕೆ ತಕ್ಕಂತೆ ಎಂಎಸ್‌ಪಿ ಹೆಚ್ಚಿಸಿಲ್ಲ, "ಈ ಎಂಎಸ್‌ಪಿ ವೈಜ್ಞಾನಿಕವಾಗಿಲ್ಲ. ಸ್ವಾಮಿನಾಥನ್ ಆಯೋಗದ ವರದಿಯನ್ವಯ ತೊಗರಿ ಎಂಎಸ್‌ಪಿ 10 ಸಾವಿರ ರೂ.ಗಳಾಗಬೇಕು," ಎನ್ನುತ್ತಾರೆ ತೊಗರಿ ಬೆಳೆಗಾರರ ಸಂಘದ ಅಧ್ಯಕ್ಷ ಬಸವರಾಜ ಇಂಗಿನ್.



"ಇತ್ತೀಚಿನ ವರ್ಷಗಳಲ್ಲಿ ತೊಗರಿ ಬೆಳೆಗಾರರಿಗೆ ಎಂಎಸ್‌ಪಿ ನೆರವಿಗೆ ಬರುತ್ತಿಲ್ಲ. ಈ ಹಿಂದೆ 6 ಸಾವಿರ ರೂ. ಎಂಎಸ್‌ಪಿ ಇದ್ದರೂ ಮಾರುಕಟ್ಟೆಯಲ್ಲಿ 5 ಸಾವಿರ ರೂ. ತೊಗರಿ ಮಾರಾಟವಾಗಿತ್ತು. ಹೀಗಾಗಿ ಎಂಎಸ್‌ಪಿ ಇದ್ದೂ ಇಲ್ಲದಂತಾಗಿದೆ. ಎಂಎಸ್‌ಪಿಗಿಂತಲೂ ಕಡಿಮೆ ಬೆಲೆಗೆ ರೈತರ ಉತ್ಪನ್ನ ವಿರೀದಿಸಿದವರ ವಿರುದ್ಧ ಕ್ರಮ ಕೈಗೊಳ್ಳಲು ಯಾವುದೇ ಕಾನೂನು ಬಲ ಇಲ್ಲ. ಎಂಎಸ್‌ಪಿ ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳುವ ಕಾನೂನು ರೂಪಿಸಿದರೆ ಎಂಎಸ್‌ಪಿ ಬಲ ಬರುತ್ತದೆ," ಎನ್ನುತ್ತಾರೆ ಪ್ರಾಂತ ರೈತ ಸಂಘದ ಸಾಯಕ ಶರಣಬಸಪ್ಪ ಮಮಶೆಟ್ಟಿ.

For more information visit
University Library Website
Web - uasbagrilibindia.org
E-mail- librarian@uasbangalore.edu.in

Farmers taste sweet success with exotic fruits

ANITHA PAILOOR
BENGALURU, DHNS

Karnataka's farmers are bringing exotic and local fruits, that were once limited to backyards, farm borders and terraces, to their fields. In the last three years, there has been a 10%-25% increase in the cultivation area of 12 fruits including avocado, dragon fruit, jackfruit, tamarind, jamun, passion fruit, rambutan and mangosteen.

Their popularity is driven by market demand, their ability to survive extreme weather events and low maintenance.

"Dragon fruit requires 80% less water compared to grapes, which is traditionally grown in this part. Maintenance is almost the same," says Narayana Swamy of Chikkaballapur, a pioneering dragon fruit farmer. He switched from grapes to multiple crops including dragon fruit and avocado.



Dragon fruit in Narayana Swamy's farm in Chikkaballapur. DH PHOTO/ANITHA PAILOOR

The shift is reflected in the greater demand for plants. Over four lakh planting material (seedlings and saplings) of avocado was produced last year. Now, there are around 200 nurseries producing exclusively avocado plants.

Reign of exotic, local fruits

Major cities that consume avocado



Import of dragon fruit to India
(in tonnes)



Other fruits

Fig, mangosteen, passion fruit, rambutan, karonda, garcinia, jamun, hanuman phal, tamarind, jackfruit

Source: G Karunakaran, scientist (fruit science), IIHR

Karnataka crushes record 622L tonnes of sugarcane

EXPRESS NEWS SERVICE
@ Bengaluru

SUGAR factories in Karnataka have crushed a record 622.26 lakh tonnes of sugarcane in the year 2021-22, 181.14 lakh tonnes more than last year.

Speaking to the media after chairing a meeting with members of the Sugarcane Control Board, Sugar Minister Shankar Patil Munenakoppa said sugar factories in Karnataka have produced 59.78 lakh tonnes of sugar during the same period.

On pending dues to sugarcane growers, the minister said sugar factories have paid Rs 19,253 crore of the pending Rs 19,624.84 crore bills to sugarcane growers.

"As of April 15, 2022, 24 sugar factories have to clear pending bills of Rs 381.94 crore to farmers. More than 99 per cent of the dues are cleared," he said, adding that sugar factories have been told to clear the remaining dues at the earliest.

He also warned the factories of action if they do not clear the pending bills under the Sugarcane (Control) Order. "Factory owners who haven't paid the bills have been issued notices," he added.



He also said instructions will be given to all deputy commissioners to collect sugarcane pending bills as land revenue tax.

According to the minister there are 89 registered sugar factories in Karnataka of which 72 are operating.

In Karnataka, 32 sugar factories are producing Ethanol, he said.

MySugar likely to restart work from July/August

Minister Munenakoppa said that the State Government has taken a decision to revive Mysore Sugar Company Ltd, which was shut two years ago. The government has allotted Rs 50 crore in connection with this in the budget and Rs 375 lakh has already been released to repair the machines. The factory is expected to crush sugarcane by July or August. Apart from this, Shriram Sugar Factory at KR Nagar has been leased out to a private agency, and is expected to commence work soon.

ವಿಕ ಸೂಪರ್‌ಸ್ಟಾರ್ ರೈತ ಪ್ರಶಸ್ತಿ ವಿಜೇತನ ತೋಟಕ್ಕೆ ರೈತರ ಭೇಟಿ



ಡ್ರ್ಯಾಗನ್ ಫ್ರೂಟ್ ಕೃಷಿ ಬಗ್ಗೆ ಪ್ರಗತಿಪರ ರೈತರು ಹಾಗೂ ಶಾಸಕ ಎಸ್.ಆರ್.ವಿಶ್ವನಾಥ್ ಮಾಹಿತಿ ಪಡೆದರು.

■ **ವಿಕ ಸುದ್ದಿಲೋಕ** ಯಲಹಂಕ

ಡ್ರಾಗನ್ ಫ್ರೂಟ್ ಕೃಷಿ ಕೈಗೊಂಡು 'ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ' ಪಡೆದ ಹಾರೋಹಳ್ಳಿಯ ರೈತ ಶ್ರೀನಿವಾಸ್ ರೆಡ್ಡಿ ಅವರ ತೋಟಕ್ಕೆ ಶಾಸಕ ಎಸ್.ಆರ್. ವಿಶ್ವನಾಥ್ ಹಾಗೂ ರೈತರು ಮಂಗಳವಾರ ಭೇಟಿ ಕೊಟ್ಟು ಕೃಷಿ ಬಗ್ಗೆ ಮಾಹಿತಿ ಪಡೆದರು.

''ಎಕರೆಗೆ 2080 ಗಿಡಗಳು ನೆಡಬಹುದಾಗಿದೆ. ಎಕರೆಗೆ ಅಂದಾಜು 70 ಸಾವಿರ ರೂ.ನಿಂದ 1ಲಕ್ಷ ರೂ. ಖರ್ಚು ಬರುತ್ತದೆ. ಒಂದೂವರೆ ವರ್ಷದಲ್ಲಿ ಗಿಡಗಳು ಹಣ್ಣು ಕೊಡಲು ಆರಂಭಿಸುತ್ತವೆ. ಒಂದು ಗಿಡದಲ್ಲಿ 15ರಿಂದ 20ಹಣ್ಣು ಸಿಗುತ್ತದೆ. ಮಾರುಕಟ್ಟೆಯಲ್ಲಿ ಕೆಜಿಗೆ 100 ರಿಂದ 200 ರೂ. ಸಿಗಲಿದೆ. ಮೂರೂವರೆ ಎಕರೆ ಜಾಗದಲ್ಲಿ ಈ ವರ್ಷ 45 ಟನ್ ಹಣ್ಣು ಬೆಳೆದಿದ್ದೇನೆ. ಗಿಡಗಳ ಮಾರಾಟದಿಂದಲೂ ಆದಾಯ ಸಿಗುತ್ತಿದೆ. ಎಲ್ಲ ಖರ್ಚು ಕಳೆದು 1.25 ಕೋಟಿ ರೂ. ಲಾಭ ಸಿಕ್ಕಿದೆ. ಬೆಂಗಳೂರು ಸಮೀಪ ವಿರುವುದರಿಂದ ಮಾರುಕಟ್ಟೆ ಸಮಸ್ಯೆ ಇಲ್ಲ. ತೋಟಕ್ಕೆ ಬಂದು ಹಲವರು ಖರೀದಿಸುತ್ತಿದ್ದಾರೆ. ಜ್ಯೂಸ್ ಪೌಡರ್ ಮಾಡುವ ಉದ್ದೇಶಕ್ಕೂ ಖರೀದಿಸುತ್ತಿದ್ದಾರೆ. ಕೊರೊನೋ ನಂತರ ಬೇಡಿಕೆ ಹೆಚ್ಚಿದೆ,'' ಎಂದು ಶ್ರೀನಿವಾಸ ರೆಡ್ಡಿ ವಿವರಿಸಿದರು.

ಶಾಸಕ ಎಸ್.ಆರ್. ವಿಶ್ವನಾಥ್ ಮಾತನಾಡಿ, ''ನರೇಗಾ ಯೋಜನೆಯಡಿ ಕೆಲಸ ಮಾಡಿಸಬಹುದು. ಅಲ್ಲದೆ, ಕೇಂದ್ರಸರ್ಕಾರದಿಂದ ಡ್ರಾಗನ್ ಫ್ರೂಟ್ ಬೆಳೆಯಲು ಎಕರೆಗೆ 1.20 ಲಕ್ಷ ರೂ. ಸಹಾಯಧನ ಸಿಗುತ್ತದೆ. ಈ ಕಾರಣದಿಂದ ವಿದೇಶಿ ಹಣ್ಣನ್ನು ಬೆಳೆಯಲು ರೈತರು ಒಲುವು ತೋರುತ್ತಿದ್ದಾರೆ,'' ಎಂದರು.

ನಾಗದಾಸನಹಳ್ಳಿ ಮುನೇಗೌಡ, ಅಪ್ಪಯ್ಯಣ್ಣ ಮತ್ತಿತರರು ಹಾಜರಿದ್ದರು.

ಸಾಗಾಟ ಸಮಸ್ಯೆ, ಬೆಂಬಲ ಬೆಲೆ ಕೊರತೆ | ರಾಜ್ಯದಲ್ಲಿ ಹಲಸಿನ ವ್ಯಾಪಾರ ಮಂಕು

ಮರದಲ್ಲೇ ಕೊಳೆಯುತ್ತಿದೆ ಕೋಟಿ ಸಂಪತ್ತು!

■ ಎಸ್.ಜೆ. ಕುರ್ಯ ಉಡುಪಿ
Subramanya.bhat@timesgroup.com

ಮಳೆಯ ಜತೆಗೆ ಹಲಸಿನ ಹಣ್ಣಿನ ಸುಗ್ಗಿ ಶುರುವಾಗಿದೆ. ಆದರೆ, ಕೇರಳದಲ್ಲಿ ನೂರಾರು ಕೋಟಿ ರೂ. ಆದಾಯ ಗಳಿಸುವ ಈ ಹಣ್ಣಿನ ಕೃಷಿಯ ವಹಿವಾಟು, ಕರ್ನಾಟಕದಲ್ಲಿ ಮಂಕಾಗಿದೆ. ಟನ್‌ಗಟ್ಟಲೆ ಹಣ್ಣುಗಳು ಮರದಲ್ಲೇ ಕೊಳೆತು, ಫಲಸಂಪತ್ತು ವ್ಯರ್ಥವಾಗುತ್ತಿದೆ.

ಬೇರೆಲ್ಲ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ಮಾರುಕಟ್ಟೆ ತಲುಪುವ ಹಲಸಿನ ಪ್ರಮಾಣ ಕಡಿಮೆ. ಅಧಿಕೃತ ಅಂಕಿ-ಅಂಶದ ಪ್ರಕಾರ, ರಾಜ್ಯದಲ್ಲಿ ಮಾರುಕಟ್ಟೆಗೆ ಬರುವ ಹಲಸಿನ ಪ್ರಮಾಣ ಸರಾಸರಿ 94 ಟನ್ ಮಾತ್ರ. ಉಳಿದಂತೆ, ಕರಾವಳಿ, ಮಲೆನಾಡಿನ ಹಳ್ಳಿಹಳ್ಳಿಗಳಲ್ಲಿ, ಕಾಡು ಬದಿಗಳಲ್ಲಿ ಹಲಸಿನ ಹಣ್ಣಿನ ಕೃಷಿಯಿದ್ದರೂ, ಅವು ವಾಣಿಜ್ಯಿಕವಾಗಿ ಹೆಚ್ಚು ಬಳಕೆಯಾಗುತ್ತಿಲ್ಲ ಎನ್ನುವುದು ವಿಪರ್ಯಾಸ ಸಂಗತಿ.

2,200 ಕೋಟಿ ರೂ. ವ್ಯರ್ಥ: ಕರ್ನಾಟಕದಂತೆ ಇತರೆ ರಾಜ್ಯಗಳು ಕೂಡ ಹಲಸನ್ನು ವಾಣಿಜ್ಯಿಕವಾಗಿ ಸದ್ಬಳಕೆ ಮಾಡಿಕೊಳ್ಳುವಲ್ಲಿ ಹಿಂದುಳಿದಿವೆ. ದೇಶದ 1,92,000 ಹೆಕ್ಟೇರ್‌ನಲ್ಲಿ ಬೆಳೆಯುವ 18.57 ಲಕ್ಷ ಮೆಟ್ರಿಕ್ ಟನ್ (2,700 ಕೋಟಿ ರೂ.) ಹಲಸಿನ ಸಂಪತ್ತಿನಲ್ಲಿ ಮೌಲ್ಯವರ್ಧಿತ 2 ಲಕ್ಷ ಮೆ. ಟನ್ (500 ಕೋಟಿ ರೂ.) ಮಾತ್ರವೇ ಸದ್ಬಳಕೆಯಾಗುತ್ತಿದೆ. ಉಳಿದಂತೆ 2,200 ಕೋಟಿ ರೂ. ಹಲಸಿನ ಸಂಪತ್ತು ವ್ಯರ್ಥವಾಗುತ್ತಿದೆ. ರಾಷ್ಟ್ರೀಯ ತೋಟಗಾರಿಕಾ ಮಂಡಳಿ ಅಂಕಿ-ಅಂಶಗಳ ಪ್ರಕಾರ, ದೇಶದ 10 ರಾಜ್ಯಗಳು 2021- 22ನೇ ಸಾಲಿನಲ್ಲಿ 1,785 ಟನ್ ಹಲಸು ಉತ್ಪನ್ನ ವೈವಿಧ್ಯವನ್ನು ದೇಶೀಯವಾಗಿ ಬಳಸಲಾಗುತ್ತಿದ್ದು, ವಿದೇಶಕ್ಕೂ ರವಾನಿಸಲಾಗುತ್ತಿದೆ. ಜಗತ್ತಿನ 75 ದೇಶಗಳಿಗೆ ಹಲಸಿನ ವಿವಿಧ ಉತ್ಪನ್ನಗಳ ರಫ್ತಿನಿಂದ ರಾಜ್ಯದ ಗಳಿಕೆ 20 ಕೋಟಿ ರೂ. ಮಾತ್ರ!

ವಿಯೆಟ್ನಾಂ ಪೈಪೋಟಿ: ಹಲಸು, ಬಾಂಗ್ಲಾದೇಶದ ರಾಷ್ಟ್ರೀಯ ಹಣ್ಣು. ಪುಟ್ಟ ದೇಶ ವಿಯೆಟ್ನಾಂ ಕೂಡ ಹಲಸಿನ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಹಲಸಿಗೆ ಇವೆರಡೂ ದೇಶಗಳ ಹಣ್ಣುಗಳು ಪೈಪೋಟಿ ನೀಡುತ್ತಿವೆ. ಅಲ್ಲಲ್ಲಿ ನಡೆಯುವ ಹಲಸಿನ ಮೇಳಗಳು ಕೊಂಚ ಮಟ್ಟಿಗೆ ಮಾರುಕಟ್ಟೆ ಸೃಷ್ಟಿಸಿರುವುದು ಸಮಾಧಾನ ಸಂಗತಿ.

ಹಲಸಿನ ನಾನಾ ಉಪಯೋಗ: ಹಲಸಿನಲ್ಲಿರುವ ಜಾಕಲೀನ್ ಔಷಧೀಯ ಅಂಶ ಏಡ್ಸ್ ನಿವಾರಣೆಗೆ ಬಳಕೆಯಾಗುತ್ತಿದೆ. ಗಮ್‌ಲೆಸ್, ಸೀಡ್‌ಲೆಸ್ ಹಲಸುಗಳ ಆವಿಷ್ಕಾರವೂ ಆಗಿದೆ. ಆತ್ಮನಿರ್ಭರ ಭಾರತದ ಹಾದಿಯಲ್ಲಿ ರೈತರ ಆದಾಯ ದ್ವಿಗುಣಕ್ಕೆ ಹಲಸು ಕೃಷಿ, ಉತ್ಪನ್ನಗಳ ಮೌಲ್ಯವರ್ಧನೆ ಪೂರಕ. ಹಲಸಿನಿಂದ 300ಕ್ಕೂ ಅಧಿಕ ತಿಂಡಿ ತಿನಿಸು ತಯಾರಿಸಲಾಗುತ್ತಿದೆ.

1 ಕೆಜಿಯಿಂದ 50 ಕೆಜಿ ತನಕ ತೂಗುವ ಹಲಸು ಹಿಂದೆ ಬಡವರ ಆಹಾರವಾಗಿ ಪರಿಗಣಿಸಲ್ಪಟ್ಟಿದ್ದರೂ ಎಲ್ಲರೂ ಸೇರಿ ತಿನ್ನಬಹುದಾದ ಕುಟುಂಬದ ಹಣ್ಣಾಗಿದೆ. ತಳಿ, ಗುಣಮಟ್ಟದ ಆಧಾರದಲ್ಲಿ ವೈವಿಧ್ಯಮಯ ಉತ್ಪನ್ನಗಳ ತಯಾರಿಗೆ ಹಲಸಿನ ಕಾಯಿ, ಹಣ್ಣಿಗೆ ಬೇಡಿಕೆಯಿದೆ. ಪ್ರೊಟೀನ್, ಫೈಬರ್, ಪೊಟ್ಯಾಷಿಯಂ, ಕ್ಯಾಲ್ಷಿಯಂ ಅಂಶ ಹೊಂದಿದೆ. 100 ವರ್ಷಕ್ಕೂ ಅಧಿಕ ಬಾಳಿಕೆ ಬರುವ ನಾಲ್ಕೈದು ಹಲಸಿನ ಮರಗಳಿದ್ದರೆ, ಮೂರು ತಲೆಮಾರುಗಳು ಆರ್ಥಿಕ ಸ್ವಾವಲಂಬಿಯಾಗಿ ಬದುಕಬಹುದು.



> ಹಲಸಿನ ಮೌಲ್ಯವರ್ಧನೆಯಿಂದ ರೈತರ ಆದಾಯ ದ್ವಿಗುಣವಾಗಲಿದ್ದು, ಮಾಹಿತಿ, ಅರಿವಿನ ಆಂದೋಲನದ ಅಗತ್ಯವಿದೆ.
>
> **- ಡಾ. ಎಂ. ಹನುಮಂತಪ್ಪ**
> ಕುಲಪತಿ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನ ವಿವಿ, ಶಿವಮೊಗ್ಗ

> ಗ್ರಾಮೀಣ ಭಾಗದಲ್ಲಿ ಬೆಳೆದ ಹಲಸಿನ ಹಣ್ಣನ್ನು 5ರಿಂದ 10 ರೂ.ಗೆ ಕೇಳುತ್ತಿದ್ದಾರೆ. ಬೇಡಿಕೆಯಿಲ್ಲ, ಪೇಟೆಗೆ ಸಾಗಣೆ ಬಲು ಕಷ್ಟ. ಹೀಗಾಗಿ ರೈತ ಉತ್ಪಾದಕ ಸಂಸ್ಥೆ, ತೋಟಗಾರಿಕಾ ಇಲಾಖೆ, ಸರಕಾರ ಹಲಸು ಖರೀದಿ ವ್ಯವಸ್ಥೆ, ಮಾರುಕಟ್ಟೆ ಜತೆಗೆ ಉತ್ತಮ ದರ ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು.
>
> **- ರಾಮಕೃಷ್ಣ ಭಟ್ ಕೆಂಜೂರು** ಬ್ರಹ್ಮಾವರ (ಪ್ರಗತಿ ಪರ ರೈತ)

2021-22ರಲ್ಲಿ ಹಲಸು ಉತ್ಪಾದನೆ

- ಒಡಿಶಾ: 312 ಟನ್
- ಅಸ್ಸಾಂ: 212 ಟನ್
- ಪಶ್ಚಿಮ ಬಂಗಾಲ: 207 ಟನ್
- ಕರ್ನಾಟಕ: 94 ಟನ್
- ಕೇರಳ: 263 ಟನ್
- ಛತ್ತೀಸ್‌ಗಢ: 204 ಟನ್
- ಜಾರ್ಖಂಡ್: 199 ಟನ್
- ತ್ರಿಪುರಾ: 133 ಟನ್
- ಮಧ್ಯಪ್ರದೇಶ: 88 ಟನ್
- ತಮಿಳುನಾಡು: 69 ಟನ್.

ಕಬ್ಬಿನ ಉಪ ಉತ್ಪನ್ನದಲ್ಲೂ ರೈತರಿಗೆ ಪಾಲು?

10-06-2022
Vk Pg 15

ಬೆಂಗಳೂರು: ಕಬ್ಬಿನ ಉಪ ಉತ್ಪನ್ನಗಳಿಂದಲೂ ರೈತರಿಗೆ ಪಾಲು ನೀಡುವ ಕುರಿತಂತೆ ಕಾನೂನು ತಜ್ಞರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಕ್ಕರೆ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಹೇಳಿದ್ದಾರೆ.



ಗುರುವಾರ ಕಬ್ಬು ಮಂಡಳಿಯ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರೈತರು ಬೆಳೆದ ಕಬ್ಬಿನಿಂದ ಬರುವ ಎಥೆನಾಲ್, ಮೊಲ್ಯಾಸಿಸ್, ವಿದ್ಯುತ್ ಸೇರಿ ಇತರ ಉಪ ಉತ್ಪನ್ನ ಗಳಿಂದಲೂ ರೈತರು ಮತ್ತು ಕಾರ್ಖಾನೆ ಮಾಲೀಕರಿಗೆ ಶೇ.70/30 ರ ಅನುಪಾತದಲ್ಲಿ ಹಂಚಿಕೆಯಾಗಬೇ ಕೆಂಬ ನಿಯಮವಿದೆ. ಆದರೆ, ಈ ಬಗ್ಗೆ ಒಂದೆರಡು ಕಾರ್ಖಾನೆ ಯವರು ಕೋರ್ಟ್ ಮೆಟ್ಟಿಲೇರಿದ್ದಾರೆ. ಆದರೂ, ಸರ್ಕಾರ ಆದಾಯ ಹಂಚಿಕೆ ಮಾಡುವ ಕುರಿತು ಕಾನೂನು ತಜ್ಞರ ಜತೆ ಸಮಾಲೋಚನೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ರಾಜ್ಯದಲ್ಲಿ ಮೊದಲ ಬಾರಿಗೆ 6.22 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ಕೆಲಸವಾಗಿದೆ. 19634 ಕೋಟಿ ರೂ. ಮೊತ್ತದಲ್ಲಿ 19424 ಕೋಟಿ ರೂ. ಕಬ್ಬಿನ ಬಿಲ್ ಕೊಡಿಸಲಾಗಿದ್ದು, 24 ಕಾರ್ಖಾನೆಗಳಿಂದ 381 ಕೋಟಿ ರೂ. ಮಾತ್ರ ಬಾಕಿ ಉಳಿದುಕೊಂಡಿದೆ. ಶೇ.99 ರಷ್ಟು ಕಬ್ಬಿನ ಬಿಲ್ ಪಾವತಿಯಾಗಿದ್ದು, ರೈತರು ಸರ್ಕಾರದ ಕ್ರಮವನ್ನು ಮೆಚ್ಚಿದ್ದಾರೆ. ಖಾಸಗಿ ಕಾರ್ಖಾನೆ ಮಾಲಿಕರಿಗೆ ಸರ್ಕಾರದ ನಿಯಮದ ಪ್ರಕಾರ ಕಬ್ಬಿನ ಬಿಲ್ ನೀಡುವಂತೆ ಸೂಚಿಸಲಾಗಿತ್ತು. ಅದರಂತೆ ನಡೆದುಕೊಂಡಿದ್ದಾರೆ. ಬಾಕಿ ಉಳಿದಿರುವ 381 ಕೋಟಿ ರೂ. ಆದಷ್ಟು ಬೇಗ ರೈತರಿಗೆ ಕೊಡಿಸುವ ಕೆಲಸ ಮಾಡಲಾಗುವುದು ಎಂದು ಹೇಳಿದರು.

ಮೈಶುಗರ್ ಸಕ್ಕರೆ ಕಾರ್ಖಾನೆ ಪುನಶ್ಚೇತನಕ್ಕೆ ಹಣ ಬಿಡುಗಡೆ ಮಾಡಲಾಗುವುದು. ಶ್ರೀರಾಮ ಸಕ್ಕರೆ ಕಾರ್ಖಾನೆ ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಬಾಗಲಕೋಟೆ ಜಿಲ್ಲೆಯ ರನ್ನ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ಪ್ರಯತ್ನ ನಡೆದಿದೆ. ತಾಂತ್ರಿಕ ಕಾರಣದಿಂದ ಬಿಡ್‌ದಾರರು ಹಿಂದೆ ಸರಿದಿದ್ದಾರೆ. ಅದನ್ನು ಸರಿಪಡಿಸಲಾಗುವುದು ಎಂದರು.

ಎಥೆನಾಲ್‌ಗೆ ಸಮಿತಿ ರಚನೆ

ಕಬ್ಬಿನಿಂದ ಉತ್ಪಾದನೆಯಾಗುವ ಎಥೆನಾಲ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡಲು ಪ್ರೋತ್ಸಾಹಿಸಲು ಕಾರ್ಖಾನೆ ಮಾಲೀಕರು, ರೈತರು ಮತ್ತು ತಜ್ಞರನ್ನೊಳಗೊಂಡ ಸಮಿತಿ ರಚಿಸಲಾಗಿದೆ. ಸಮಿತಿಯಿಂದ ವರದಿ ಪಡೆದುಕೊಂಡು ರಾಜ್ಯದಲ್ಲಿ ಎಥೆನಾಲ್ ಉತ್ಪಾದನೆಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಕ್ರಮ ಕೈಗೊಳ್ಳಲಾಗುವುದು. ಕಬ್ಬಿನಿಂದ ರಾಜ್ಯ ಸರ್ಕಾರಕ್ಕೆ ಸುಮಾರು 6500 ಕೋಟಿ ರೂ. ಜಿಎಸ್‌ಟಿ ದೊರೆಯುತ್ತಿದೆ. ಹೀಗಾಗಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

10-06-2022
Uv Pg 07

Thailand govt plans to give away million marijuana plants to farmers

Bloomberg



Thailand decriminalised medical and industrial use of marijuana

Thailand, which has a tradition of using cannabis to relieve pain and fatigue, legalised medicinal marijuana in 2018. The decision by the Food and Drug Administration to remove all of the plant from the category of narcotic drugs makes Thailand the first nation in Asia to decriminalise marijuana for medical and industrial use. But it is not following the examples of Uruguay and Canada, the only two countries so far that have legalised recreational marijuana on a national basis.

Among those at the front of the queue at one Bangkok shop was Rittipong Dachkul, 24, waiting since Wednesday evening to buy his first ever legal marijuana. "We're now able to find it easily, we don't have to worry about the source, but I have no idea about the quality," he said, referring to the strength of the products on offer.

The government, banking on the plant as a cash crop, plans to give away a million plants to encourage farmers to take up its cultivation. "After Covid, the economy going down the drain, we really do need this," said Chokwan Kitty Chopaka, who owns a shop selling cannabis gum sweets.

But authorities aim to head off an explosion of recreational use by limiting the strength of the products on offer. The possession and sale of cannabis extracts containing more than 0.2% of its psychoactive ingredient, tetrahydrocannabinol (THC), is not allowed, which will mean smokers of the drug known as "pot", "weed" and a host of other names, will struggle to get "stoned".

"Buds with 0.2% THC is considered low, so you would need to consume a lot to get high," said Suphamet Hetrakul, co-founder of the Teera Group, which grows cannabis for medical use. THC is concentrated in the plant's flowers, or buds.

Cannabis growers have to register on a government app called PlookGanja, or grow ganja, another nickname for the spikey-leafed plant. Nearly 100,000 people have signed up to the app, said health ministry official Paisan Dankhum.

Suphamet said he was concerned about quality control among the many new cultivators. "It will be hard to control the level of THC and other contaminants in their products and that could be dangerous for consumers," Suphamet said.

10-06-2022 Times of Ind Pg 16

10-06-2022 Uv Pg 06

ಸಂಪಾದಕೀಯ

ಪರ್ಯಾಯ ಬೆಳೆಗಳತ್ತ ರೈತರನ್ನು ಸೆಳೆಯಲು ಕೇಂದ್ರದ ಯತ್ನ

ವಾರಗಳ ಹಿಂದೆಯಷ್ಟೇ ದೇಶದ ಪಶ್ಚಿಮ ಕರಾವಳಿಯನ್ನು ನೈಋತ್ಯ ಮಾರುತಗಳು ಪ್ರವೇಶಿಸಿದ್ದು ನಿಧಾನವಾಗಿ ದೇಶದ ಒಂದೊಂದೇ ರಾಜ್ಯಕ್ಕೆ ಕಾಲಿಡಲಾರಂಭಿಸಿವೆ. ಮುಂಗಾರನ್ನೇ ಅವಲಂಬಿಸಿರುವ ದೇಶದ ಕೃಷಿ ವಲಯ ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ಸಜ್ಜಾಗುತ್ತಿದೆ. ಈ ಬಾರಿ ಮುಂಗಾರು ಸಾಮಾನ್ಯವಾಗಿರಲಿದೆ ಎಂಬ ಹವಾಮಾನ ಮುನ್ಸೂಚನೆಯಿಂದ ಆಶಾವಾದದಲ್ಲಿರುವ ರೈತರು ಬೇಸಾಯ ಕಾರ್ಯ ಗಳನ್ನು ಆರಂಭಿಸಿದ್ದಾರೆ. ಈ ನಡುವೆಯೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಂಪುಟ ಸಮಿತಿ ಭತ್ತ, ರಾಗಿ, ಸೂರ್ಯಕಾಂತಿ, ಸೋಯಾ, ಮೆಕ್ಕೆ ಜೋಳ, ಹತ್ತಿ ಸಹಿತ 14 ಖಾರಿಫ್ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸುವ ಮೂಲಕ ರೈತರಲ್ಲಿ ಹೊಸ ಹುಮ್ಮಸ್ಸು ಮೂಡಿಸಿದೆ.

ಮುಂಗಾರು ಮಳೆ ಸುರಿಯಲಾರಂಭಿಸಿರುವ ರಾಜ್ಯಗಳಲ್ಲಿ ರೈತರು ಬೇಸಾಯ ಚಟುವಟಿಕೆಗಳನ್ನು ಈಗಾಗಲೇ ಆರಂಭಿಸಿದ್ದು ಕೃಷಿ ಭೂಮಿಯನ್ನು ಹದಗೊಳಿಸುವಲ್ಲಿ ನಿರತರಾಗಿದ್ದಾರೆ. ಇದೀಗ ಸರ್ಕಾರ 14 ಖಾರಿಫ್ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸುವ ನಿರ್ಧಾರವನ್ನು ಪ್ರಕಟಿಸಿರುವುದರಿಂದ ರೈತರು ಬಿತ್ತನೆಗೂ ಮುನ್ನವೇ ಯಾವ ಬೆಳೆ ಬೆಳೆದರೆ ಹೆಚ್ಚಿನ ಆದಾಯ ಗಳಿಸಬಹುದು ಮತ್ತು ತಮ್ಮ ಪರಿಶ್ರಮಕ್ಕೆ ಕಕ್ಕ ಪ್ರತಿಫಲ ಲಭಿಸೀತು ಎಂದು ನಿರ್ಧರಿಸಿ ಆ ಬೆಳೆಗಳನ್ನು ಬೆಳೆಯಲು ಇದು ಅನುಕೂಲವಾಗಲಿದೆ. ಆಷ್ಟುಮಾತ್ರವಲ್ಲದೆ ಸಾಂಪ್ರದಾಯಿಕವಾಗಿ ಬೆಳೆಯುತ್ತಾ ಬಂದಿರುವ ಬೆಳೆಗಳ ಹೊರತಾಗಿ ಪರ್ಯಾಯ ಬೆಳೆಗಳನ್ನು ಬೆಳೆದಲ್ಲಿ ಹೆಚ್ಚಿನ ಆದಾಯವನ್ನು ಪಡೆಯಲು ಸಾಧ್ಯವೇ ಎಂದು ಮುಂದಾಲೋಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲು ಕೇಂದ್ರ ಈ ನಿರ್ಧಾರ ಪೂರಕವಾಗಲಿದೆ.

'ಬತ್ತನೆ ಬೀಜದಿಂದ ಮಾರುಕಟ್ಟೆಯವರೆಗೆ' ಎಂಬ ಏನೂತನ ಪರಿಕಲ್ಪನೆಯಡಿ ಕೇಂದ್ರ ಸರ್ಕಾರ ಕೃಷಿ ಬೆಳೆಗಳ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸುವ ನಿರ್ಧಾರವನ್ನು ಕೈಗೊಂಡಿದ್ದು ಇದು ರೈತರಿಗೆ ತಾವು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ಲಭಿಸುವುದನ್ನು ಖಾತರಿಪಡಿಸಿದೆ. ಆಹಾರ ಬೆಳೆಗಳಲ್ಲದೆ ಧಾನ್ಯ, ವಾಣಿಜ್ಯ ಮತ್ತು ಎಣ್ಣೆಕಾಳು ಬೆಳೆಗಳ ಕನಿಷ್ಠ ಬೆಂಬಲ ಬೆಲೆಯನ್ನೂ ಹೆಚ್ಚಿಸಲಾಗಿದೆ. ಕಳೆದ ಕೆಲವು ವರ್ಷಗಳಿಂದ ಒಂದಿಷ್ಟು ನಿರಾಕೆ ಅನುಭವಿಸಿದ್ದ ವಾಣಿಜ್ಯ ಬೆಳೆಗಾರರಿಗೆ ಇದರಿಂದ ಉತ್ತೇಜನ ಲಭಿಸಲಿದೆ. ಅದರಲ್ಲೂ ಮುಖ್ಯವಾಗಿ ಕೆಲವು ಎಣ್ಣೆಕಾಳು ಬೆಳೆಗಳಿಗೆ ಗರಿಷ್ಠ ಪ್ರಮಾಣದಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸಲಾಗಿದೆ. ಎರಡು ವರ್ಷಗಳಿಂದೀಚೆಗೆ ಜಾಗತಿಕ ಮಾರುಕಟ್ಟೆಯಲ್ಲಿನ ಏರುಪೇರುಗಳಿಂದಾಗಿ ದೇಶದಲ್ಲಿ ಖಾದ್ಯ ತೈಲ ಬೆಲೆ ಒಂದೇ ಸಮನೆ ಏರಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಕೇಂದ್ರದ ಈ ನಿರ್ಧಾರ ಸ್ವಾಗತಾರ್ಹವಾಗಿದ್ದು ಈ ಬಾರಿಯ ಖಾರಿಫ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಎಣ್ಣೆಕಾಳುಗಳನ್ನು ಬೆಳೆಯಲು ಮುಂದಾಗುವ ನಿರೀಕ್ಷೆಯನ್ನು ಹುಟ್ಟುಹಾಕಿದೆ.

ಏತನ್ಮಧ್ಯೆ ದೇಶದ ಪ್ರಮುಖ ರೈತ ಸಂಘಟನೆಗಳು ಬೆಂಬಲ ಬೆಲೆ ಹೆಚ್ಚಳದ ಪ್ರಮಾಣ ಸಾಲದು ಎಂದು ಅಸಮಾಧಾನ ವ್ಯಕ್ತಪಡಿಸಿವೆ. ಹಣದುಬ್ಬರ ಒಂದೇ ಸಮನೆ ಏರಿಕೆಯಾಗುತ್ತಿದ್ದರೆ ಡೀಸೆಲ್, ರಸಗೊಬ್ಬರದ ಬೆಲೆಯೂ ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಇದು ಇನ್ನಷ್ಟು ಹೆಚ್ಚುವ ಸಾಧ್ಯತೆಗಳಿರುವುದರಿಂದ ಬೆಂಬಲ ಬೆಲೆ ತೀರಾ ಆತ್ಮಲ್ಪವಾಗಿದೆ ಎಂದು ಪ್ರತಿಕ್ರಿಯಿಸಿವೆ. ಸದ್ಯದ ಪರಿಸ್ಥಿತಿಯಲ್ಲಿ ರೈತ ಸಂಘಟನೆಗಳ ಈ ಆಕ್ಷೇಪ ವಾಸ್ತವಕ್ಕೆ ಸನಿಹವಾಗಿದ್ದು, ಇತ್ತ ಕೇಂದ್ರ ದೃಷ್ಟಿ ಹರಿಸುವ ಅಗತ್ಯವಿದೆ. ರೈತನಿಗೆ ಉತ್ಪಾದನ ವೆಚ್ಚಕ್ಕಿಂತ ಒಂದಿಷ್ಟು ಹೆಚ್ಚಿನ ಪ್ರಮಾಣದ ಆದಾಯ ಲಭಿಸುವಂತೆ ನೋಡಿಕೊಳ್ಳಬೇಕಾಗಿರುವುದು ಕೂಡ ಸರ್ಕಾರದ ಕರ್ತವ್ಯ.